**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 1164/2019**

ಪಿಡಬ್ಲ್ಯೂ -3

ಸಿಡಬ್ಲ್ಯೂ -4

| | | |
|---|---|---|
| ಸಾಕ್ಷಿದಾರರ ಹೆಸರು | - | ಸೋಮಶೆಟ್ಟಿ |
| ತಂದೆಯ ಹೆಸರು | - | ಬೋರಶೆಟ್ಟಿ |
| ವಯಸ್ಸು | - | 41 ವರ್ಷ |
| ಕೆಲಸ | - | ನಿವೃತ್ತ ಅಬಕಾರಿ ಉಪ ನಿರೀಕ್ಷಕರು |
| ವಾಸ | - | ಕೆ ಆರ್ ನಗರ |

**ದಿನಾಂಕ 07-01-2025 ರಂದು ಸಾಕ್ಷಿಯನ್ನು ಕರಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸಾಕ್ಷಿ ಸ್ವತಃ ನುಡಿದಿರುತ್ತಾರೆ.**

ನಾನು ಅಕ್ಟೋಬರ್ 2016 ರಿಂದ ಡಿಸೆಂಬರ್ 2018 ವರಗೆ ಕೆ ಆರ್ ನಗರ ಅಬಕಾರಿ ವಲಯ ರಕ್ಷಕನಾಗಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ 22-11-2017 ರಂದು ಅಬಕಾರಿ ಉಪನಿರೀಕ್ಷಕರ ಜೊತೆ ನಾನು ಮತ್ತು ಚಾಸಾ- 4, 5 ಮತ್ತು ವಾಹನ ಚಾಲಕ ರಾಜೇಶರವರು ಮದ್ಯಾಹ್ನ 2.00 ಗಂಟೆ ಸಮಯದಲ್ಲಿ ಕೆ ಆರ್ ನಗರ ತಾಲ್ಲೂಕು ಚುಂಚನಕಟ್ಟೆ ಹೋಬಳಿ, ಮಾಯಿಗೌಡನ ಹಳ್ಳಿ ಗ್ರಾಮದ ಬಸ್ ನಿಲ್ದಾಣದ ಬಳಿ ತೆರಳಿ ಅಲ್ಲಿಯೇ ಇದ್ದ ಚಾಸಾ- 1 ಮತ್ತು 2 ರವರನ್ನು ನಮ್ಮ ಇಲಾಖಾ ವಾಹನ ಸಂಖ್ಯೆ ಕೆಎ 09 ಜಿ 743 ನಲ್ಲಿ ಚಾಸಾ 1 ಮತ್ತು 2 ಅವರನ್ನು ಕರೆದುಕೊಂಡು ಅವರಿಗೆ ಮಂಜುನಾಥರವರ ಮನೆಯಲ್ಲಿ ಅಕ್ರಮವಾಗಿ ಮದ್ಯವನ್ನು ಹೊಂದಿ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿರುವ ಬಗ್ಗೆ ಅವರನ್ನು ಪಂಚರಾಗಿ ಸಹಕರಿಸುವಂತೆ ಕೋರಲಾಗಿ ತಿಳಿಸಿದಾಗ ಅವರು ಒಪ್ಪಿಕೊಂಡಿರುತ್ತಾರೆ.

ನಂತರ ಅವರಿಗೆ  ಚಾಸಾ 5 ರವರು ನೋಟಿಸ್ ನ್ನು ಜಾರಿ ಮಾಡಿರುತ್ತಾರೆ. ನಂತರ ನಾವುಗಳು   ಮತ್ತು ಚಾಸಾ 1 ಮತ್ತು 2 ರವರ  ಜೊತೆಗೆ ಇಲಾಖಾ ಜೀಪಿನಲ್ಲಿ ಮಂಜುನಾಥರವರ ಮನೆಯ ಹತ್ತಿರ ತೆರಳಿದಾಗ ಸ್ವಲ್ಪ ದೂರದಲ್ಲಿರುವಾಗಲೇ ಒಬ್ಬ ವ್ಯಕ್ತಿ ಇಲಾಖಾ ವಾಹನ ಮತ್ತು ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಗಾಬರಿಗೊಂಡು ಓಡಿ ಹೋದನು. ನಂತರ  ನಾವು ವಾಹನದಿಂದ ಕೆಳಗೆ  ಇಳಿದು ಆತನನ್ನು  ಹಿಡಿಯಲು ಹಿಂಬಾಲಿಸಿ  ಹಿಡಿಯಲು ಪ್ರಯತ್ನ ಪಟ್ಟರು ಸಹ ಆತನು ಕೈಗೆ ಸಿಗದೇ ಓಡಿ ಹೋಗಿರುತ್ತಾನೆ.

ನಂತರ ಮನೆಯ ಹತ್ತಿರ ಬಂದು  ಶೋಧನಾ ಸಮುಚ್ಚಿತ ಆಧಾರವನ್ನು ತಯಾರಿಸಿಕೊಂಡು ನಾವು ಮತ್ತು  ಪಂಚರು ಪರಸ್ಪರ ಅಂಗ ಶೋಧನೆಯನ್ನು ಮಾಡಿಕೊಂಡು  ನಮ್ಮ ಬಳಿ ಯಾವುದೇ ಅಬಕಾರಿ ಅಕ್ರಮ ವಸ್ತುಗಳು ಇಲ್ಲದಿರುವ ಬಗ್ಗೆ ಖಚಿತ ಪಡಿಸಿಕೊಂಡು ನಂತರ ಮದ್ಯಾಹ್ನ 2.00 ಗಂಟೆ ಸಮಯದಲ್ಲಿ ಮನೆಯೊಳಗೆ ಪ್ರವೇಶಿಸಿ ಶೋಧಿಸಿದಾಗ  ಹಾಲ್  ಬಲಭಾಗದ ನೈರುತ್ಯೆ ಮೂಲೆಯಲ್ಲಿ ಒಂದು ಬಿಳಿಯ ಬಣ್ಣದ ಪ್ಲಾಸ್ಟಿಕ್ ಚೀಲ ಕಂಡು ಬಂದಿರುತ್ತದೆ. ನಂತರ ಸದರಿ ಚೀಲವನ್ನು ಪಂಚರ ಸಮಕ್ಷಮ ತೆರೆದು ನೋಡಲಾಗಿ ಸದರಿ ಚೀಲದಲ್ಲಿ  90  ಎಂ ಎಲ್ ನ 26  ಓರಿಜಿನಲ್ ಚಾಯಸ ಟೆಟ್ರಾ ಪ್ಯಾಜಕೆಟ್ಗಳು ಇದ್ದವು. ನಂತರ ದೊರೆತ ಎಲ್ಲಾ ಮದ್ಯದ ಪ್ಯಾಕೆಟ್ ಗಳನ್ನು ರಾಸಾಯನಿಕ ಪರೀಕ್ಷೆಗೆ ಮಾದರಿಯನ್ನು ತೆಗೆದು ಒಂದು  ಬಿಳಿಯ ಬಟ್ಟೆಯಿಂದಕ್ಕೆ  ಚೀಲವನ್ನು ತಯಾರಿಸಿ ದೊರೆತ ಎಲ್ಲಾ ಮದ್ಯವನ್ನು ಎಫ್ ಎಸ್ ಎಲ್‌ಗೆ ಕಳುಹಿಸುವ ಸಲುವಾಗಿ ಸ್ಯಾಂಪಲ್ ನ್ನು ತೆಗೆದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಬಾಯಿಯನ್ನು  ಹೊಲೆದು ಸೀಲ್ ಮಾಡಿ ಇಲಾಖಾ ಸೀಲ್ ಸಂಖ್ಯೆ 296 ದಿಂದ ಬಾಯಿಯಿಂದ ಕಟ್ಟಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಲಾಯಿತು.

ನಂತರ ಪಂಚರನ್ನು ಓಡಿ ಹೋದ  ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಓಡಿ ಹೋದ ವ್ಯಕ್ತಿಯ ಹೆಸರು ಮಂಜುನಾಥ ತಂದೆ ಸುಬ್ಬೇಗೌಡ, ಮಾಯಿಗೌಡನ ಹಳ್ಳಿ ಗ್ರಾಮ ಎಂದು ತಿಳಿಸಿರುತ್ತಾರೆ. ನಂತರ ಮಾದರಿ ಚೀಟಿ ನಮೂನೆಯಲ್ಲಿ ಪ್ರಕರಣದ ವಿವರ ಬರೆದು ಪಂಚರ ಸಹಿಗಳನ್ನು ಪಡೆದುಕೊಂಡು ಮಾದರಿ ಕೈ ಚೀಲದ ಮೇಲೆ

ಅಂಟಿಸಲಾಯಿತು. ನಂತರ ಮಾದರಿ ನಕಲು ಚೀಟಿಗೂ ಸಹ ಪಂಚರ ಸಹಿಗಳನ್ನು ಪಡೆಯಲಾಯಿತು. ನಂತರ ಪಂಚನಾಮೆಯನ್ನು ಮದ್ಯಾಹ್ನ 2..00 ರಿಂದ 3.00 ಗಂಟೆಯವರೆಗೆ ಸ್ಥಳದಲ್ಲಿ ಪಂಚನಾಮೆಯನ್ನು ನಾನೇ ನನ್ನ ಸ್ವಹಸ್ತದ ಬರವಣಿಗೆಯಲ್ಲಿ ಬರೆದು ಸ್ಥಳದಲ್ಲಿ ಹಾಜರಿದ್ದ ಚಾಸಾ 1 ಮತ್ತು 2, ನನ್ನ ಹಾಗೂ ಚಾಸಾ4 ಮತ್ತು 5 ರವರ ಸಹಿಗಳನ್ನು ಪಡೆದುಕೊಂಡಿರುತ್ತಾರೆ.

ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ ಅದೇ ರೀತಿ ಸಾಕ್ಷಿ ನ್ಯಾಯಾಲಯದ ಮುಂದಿರುವ ಎಫ್ ಎಸ್ ಎಲ್ ಗೆ ಕಳುಹಿಸಿರುವ ಎಮ್ ಒ 1 ನ್ನು ನೊಡಿ ಗುರುತಿಸಿರುತ್ತಾರೆ. ಸಾಕ್ಷಿಗೇ ಪಂಚನಾಮೆಯನ್ನು ತೋರಿಸಿ ಸಾಕ್ಷಿಯು ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು **ನಿಪಿ 1 ಡಿ** ಎಂದು ಗುರುತಿಸಲಾಯಿತು. ನಂತರ ನಾನು ತನಿಖಾಧಿಕಾರಿಯವರು ಮುಂದೆ ನನ್ನ ಹೇಳಿಕೆಯನ್ನು ದಿಃ 30-01-2018 ರಂದು ನೀಡಿರುತ್ತೇನೆ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದರಿಂದ ಕಾಲಾವಕಾಶವನ್ನು ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**

ಓ ಹೇ ಕೇ ಸ ಇದೆ ಎಂ

.

**(ಚಂದನ್ ಎಸ್ )**

. ಪ್ರಧಾನ ಸಿವಿಲ್ ನ್ಯಾಯಾಧೀಶರು,

. ಮತ್ತು ಪ್ರದನ್ಯಾದಂ., ಕೆ.ಆರ್.ನಗರ